ಮೈಸೂರ ಗೆಜಿಟ.

ನಂ. 40 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1890.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 11, ಸನ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟಿಂಡೆಂಟರು, ಕಾಂವೆಟ್ಕೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಸ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪ್ಯಾಫಿಸ್ ನೋಟಿಸುಗಳು.

3ನೇ ಭಾಗ—ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷನ್‌ಗಳು—ಯಿಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಯಿಲ್ಲಾ.

೧ನೇ ಭಾಗ.

ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 8ನೇ ಸೆಪ್ಟಂಬರ್ 1890.

ನಂ. 253.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮೂಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತು ದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಕಡಾ 25 ರೂಪಾಯಿ ಡಿಪಾಸಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮಿನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತನ್ನ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತನ್ನ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯರಾಗಲಿ, ಅವರ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮಿನಿನಲ್ಲಿ ತಮಗೆ ಹಕ್ಕುಬಾಧ್ಯತೆಯಿಂಬ ಇತರ ಯಾವ ಮನುಷ್ಯರಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಆಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೇ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಕೂಫ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜು ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾನುವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯುಟಿ ಕಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯ್ತು 90 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲು ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಜೇರೀಜು	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವ ಬಾಕಿ ಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎಕರೆ ಗುಂಟೆ ಗಜ	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಬಡ್ಡಿಪಟ್ಟು ಚಿಂತಾಮಣಿ	ಬಿಲಿಕಲ್ಲು ನೇರ್ಪ	ಜೋಡಿ ಕರಿ ಜಂಗಲ್‌ಹಳ್ಳಿ	ಕವಲಾಬಾಯಿ, ನಾರಣಾಚಾರ್ ಮತ್ತು ಇತರರು ಯಿಬ್ಬರು	108 9 0	40 0 0	24 8 0 ಲೋಕಲ್‌ಸೆಸ್ ದೇಖೀಲ್	231 11 5 ಮತ್ತು ಹರಾಜ್ ತಾರೀಖು ವರಿಗೆ ಆಗುವ ಬಡ್ಡಿ	1890ನೇ ಇಸವಿ ಅಕ್ಟೋಬರ್ ತಾರೀಖು 31ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ ರೂಬರೂ.
			ಕಾಯಂಗುತ್ತಾ ಪೆಲಾರ್ಲ ದಿನ್ನೆ	ರಂಗಂಣ ನಂಜುಂಡಯ್ಯ ವಗೈರೆ	143 4 0	11 14 10	12 12 0 ಲೋಕಲ್‌ಸೆಸ್ ದೇಖೀಲ್	148 13 10 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡಿ	ಡಿಟೋ
		ನಾಯಗನಹಳ್ಳಿ	ಕಾಯಂಗುತ್ತಾ ಪೆರುಮಾಗನ ಹಳ್ಳಿ	ರಾಮಚಂದ್ರ ರಾವ್, ಮಾಧವ ರಾವ್ ಮತ್ತು ಗೊಜಿಯಮ್ಮ	ಖಂ. ಕೂ. ಪ. 6 5 0	52 5 10	38 0 9 ಲೋಕಲ್‌ಸೆಸ್ ದೇಖೀಲ್	442 6 3 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡಿ	ಡಿಟೋ
ಬಂಗಳೂರು.	ದೇವನಹಳ್ಳಿ	ಜಾಲಾ	ಜಾಗಲಪ್ಪಟ್ಟ (ಜೋಡಿ)	ಮಧೂರಾವ್ ವಗೈರೆ	ಎಕರೆ ಗುಂಟೆ ಗಜ 839 23 0	704 15 0	346 0 11	505 5 7	ಡಿಟೋ
		ಬಿದಿರೆ	ಕಗ್ಗಲಹಳ್ಳಿ (ಜೋಡಿ)	ವೆಂಕಟರಂಗಾಚಾರ್ ವಗೈರೆ	ಖಂ. ಕೂ. ಪ. 13 2 12	140 0 0	136 12 0	256 9 4	ಡಿಟೋ

ಪರಾ.—ಜೋಡಿ ದಾರರುಗಳಿಂದಲಾಗಲಿ, ಯಾ ಕಾಯಂಗುತ್ತಾದಾರರುಗಳಿಂದಾಗಲಿ ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಾಗಲಿ, ದೇಣಿಗೆಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ, ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜ್ ವಳಪಟ್ಟಿರುವದಿಲ್ಲ.

ತಾರೀಖು 2ನೇ ಸೆಪ್ಟಂಬರ್ 1890.

ನಂ. 235.—ಸ್ಯ 1879ನೇ ಇಸವಿಯ ಇಂಡಿಯ್ಯ ಸ್ಟ್ಯಾಂಪಾಕ್ಟಿನ 9(2)ನೇ ಸೆಕ್ಷನ್‌ನಿಂದ ಉಂಟು ಮಾಡಲ್ಪಟ್ಟ ಅಧಿಕಾರ ಗಳನ್ನು ಚಲಾಯಿಸುವವರಲ್ಲಿ ಮೈಸೂರು ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದವರು ಈ ಕೆಳಗೆ ಕಂಡ ನಿಬಂಧನೆಗಳನ್ನು ಉಂಟು ಮಾಡಿರುತ್ತಾರೆ:—

(1.) ಯಾವ ದಸ್ತಾವೇಜಾಗಲೀ ಮುದ್ರಿಸಲ್ಪಟ್ಟ ಭಾಷಾ ಕಾಗದ್ದಮೇಲೆ ಬರೆಯಲ್ಪಡಬೇಕಾದಾಗ, ಅಂಥಾ ದಸ್ತಾವೇಜಿನ ಮೇಲೆ ತೆರಲ್ಪಡಬೇಕಾದ ಸ್ಟ್ಯಾಂಪು ಹಾಸಲು ವಂದುನೂರು ರೂಪಾಯಿಗಳಿಗೆ ವಿಾರದೆ ಯಿದ್ದರೆ—

ಅವಶ್ಯಕವಾದ ಸ್ಟ್ಯಾಂಪಿಗೋಸ್ಕರ ಯಾವದಾದರೂ ಖಜಾನೆಗೆ ದರಖಾಸ್ತು ಮಾಡಲ್ಪಟ್ಟು, ಅಂಥಾ ಖಜಾನೇ ಆಫೀಸರು ಆಫವಾ,

ಅಂಥಾ ದರಖಾಸ್ತು ವಬ್ಬ ಸ್ಟ್ಯಾಂಪು ವೆಂಡರಿಗೆ ಮಾಡಲ್ಪಟ್ಟು ಅಂಥಾ ವೆಂಡರು,

ಖಾಯಿಷ್ ಮಾಡಿದ ಕಿಮ್ಮತ್ತಿನ ಬಂದೇ ಸ್ಟ್ಯಾಂಪನ್ನು ಸರಬರಾಯಿ ಮಾಡುವದಕ್ಕೆ ಅವಕಾಶವಿಲ್ಲವೆಂತ ಸರಟಿಫೈ ಯಾನೆ ದೃಢಪಡಿಸಿದ ಸಂದರ್ಭದಲ್ಲಿ ವಿನಾ,

ಅನ್ಯಥಾ ಮುದ್ರಿಸಲ್ಪಟ್ಟ ಬಂದೇ ಸ್ಟ್ಯಾಂಪನ್ನು ಉಪಯೋಗಿಸತಕ್ಕದ್ದು.

(2.) ಈ ರೂಲ್ ಅನುಸರಿಸಿ ಯಾವದಾದರೂ ವಂದು ದಸ್ತಾವೇಜಿನ ಬಗ್ಯಾಗಿ ಸ್ಟ್ಯಾಂಪು ಹಾಸಲುಕಂಛರ್ತಿಗೋಸ್ಕರ ಯರಡು ಯಾ ಹೆಚ್ಚು ಸಂಖೆಯ ಮುದ್ರಿಸಲ್ಪಟ್ಟ ಸ್ಟ್ಯಾಂಪು ಉಪಯೋಗಿಸಲ್ಪಟ್ಟಾಗ, ಹಾಗೆ ಉಪಯೋಗಿಸಲ್ಪಟ್ಟ ಪ್ರತಿ ಸ್ಟ್ಯಾಂಪಿನ ಮೇಲೆಯೂ ಅಂಥಾ ದಸ್ತಾವೇಜಿನ ವಂದುಭಾಗ ಬರೆಯಲ್ಪಡತಕ್ಕದ್ದು.

ತಾರೀಖು 9ನೇ ಸೆಪ್ಟಂಬರ್ 1890.

ನಂ. 248.—ಸ್ಯ 1870ನೇ ಇಸವಿಯ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದಕ್ಕೆ ಲಗತ್ತಾಗಿರುವ ತಖ್ತೆಯಲ್ಲಿ ವಿವರಿಸೋಣಾದ ಜಮೀನು, ಸರ್ಕಾರ್‌ಕೆಲಸಕ್ಕಾಗಿ ಅಂದರೆ ಮೈಸೂರು ಡಿಸ್ಟ್ರಿಕ್ಟ್ಟು ಮಳವಳ್ಳಿ ತಸಬೆಯಲ್ಲಿ ಬಂದು ಆಸ್ಪತ್ರಿಯನ್ನು ಕಟ್ಟುವದಕ್ಕೆ ಬೇಕಾಗಿರುತ್ತೆ.

ನಂಬರ್.	ಹೋಬಳಿ.	ಮಾಲೀಕರ ಹೆಸರು.	ವಿಸ್ತೀರ್ಣ. ಉದ್ದ ಗಜ	ವಿಸ್ತೀರ್ಣ. ಅಗಲ ಗಜ	ವಿವರಣೆ.	ಪರಾ.
1	ಹಿಪ್ಪಿಗೆರೆ	1. ಚೌಡಿಗವ್ವಡ 2. ಜವನಿಗವ್ವಡ 3. ಚೌಡ ಮತ್ತು 4. ಕಿದ್ದೇಗೌಡ	51	37	ಮೂರು ಕಡೆಯಲ್ಲಿ ಹೆಂಚಿನ ಚಾವಣಿಯುಳ್ಳ ಬಂಡಿ ಮೋಟು	ಚಕ್ಕು ಬಂದಿ. ಪೂರ್ವಕ್ಕೆ —ಮದ್ದೂರ್ ತಿವಸ ಮುದ್ರದ ರಸ್ತೆ ಪಶ್ಚಿಮಕ್ಕೆ —ಬಂಜರ್ ಜಮೀನು ದಕ್ಷಿಣಕ್ಕೆ —ಬಿಲ್ಲೆಗೆ ಹೋಗುವ ರಸ್ತೆ ಉತ್ತರಕ್ಕೆ —ಸರ್ಕಾರಿ ಬಂಜರು

ತಾರೀಖು 25ನೇ ಸೆಪ್ಟಂಬರ್ 1890.

ನಂ. 270.—ಮೆಸ್ಸರ್ ಟಿ. ನರಹರಿರಾವ್ ಯಂ. ಯೆಲ್. ಇವರು, ನಂದೀದುರ್ಗ ಡಿವಿಜ್ ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜ್‌ರ ಕೋರ್ಟು ಚಾರ್ಜನ್ನು 1890ನೇ ಇಸವಿ ಸೆಪ್ಟಂಬರ್ 15ನೇ ಮಕ್ಕು ಮಿನ ಪೂರ್ವಾನ್ಹದಲ್ಲಿ ವಹಿಸಿರುತ್ತಾರೆ.

ನಂ. 274.—ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಬಿ. ಸೀತಾರಾಮಯ್ಯನವರು 1890ನೇ, ಇಸವಿ ಸೆಪ್ಟಂಬರ್ 8ನೇ ಮಕ್ಕು ಮಿನಲ್ಲಿ ತಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ತಾವು ಕೆಲಸದ ಮೇಲೆ ಬಂದಿರುವಹಾಗಿ ರಿಪೋರ್ಟುಮಾಡಿ ತಿವಮೊಗ್ಗಾ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ಚಾರ್ಜನ್ನ ಅದೇ ತಿಂಗಳು 10ನೇ ಮಕ್ಕು ಮಿನ ಪೂರ್ವಾನ್ಹದಲ್ಲಿ ವಹಿಸಿರುತ್ತಾರೆ.

ನಂ. 275.—ಮೆಸ್ಸರ್ ಸಿ. ಶ್ರೀನಿವಾಸಯ್ಯಂಗಾರ್ಯು ಕೋರ್ಟು ಶಿರಸ್ತೇದಾರ್ರಿಗೆ 1890ನೇ ಇಸವಿ ಸೆಪ್ಟಂಬರ್ 10ನೇ ಮಕ್ಕು ಮಿನ ಪೂರ್ವಾನ್ಹದಲ್ಲಿ ಮೈಸೂರು ಸಬ್ ಜಡ್ಜ್ ಕೋರ್ಟಿನ ಚಾರ್ಜನ್ನು ವೊಪ್ಪಿಸಿರುತ್ತಾರೆ.

ನಂ. 276.—ಮೆಸ್ಸರ್ ಯಂ. ರಾಮಸ್ವಾಮಿಅಯ್ಯರವರು ಮೈಸೂರು ಸಬ್ಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್ ಚಾರ್ಜನ್ನು 1890ನೇ ಇಸವಿ ಸೆಪ್ಟಂಬರ್ 12ನೇ ಮಕ್ಕು ಮಿನ ಪೂರ್ವಾನ್ಹದಲ್ಲಿ ವಹಿಸಿರುತ್ತಾರೆ.

706

ತಾರೀಖು 27ನೇ ಸೆಪ್ಟಂಬರ್ 1890.

ನಂ. 7735.–868.–ದರ್ಬಾರ್ ಬಕ್ಷೀರಾದ ರಾಯಬಹದೂರ್ ಯಿ. ನರಸಿಹ್ಮಯ್ಯಂಗಾರ್ಯವರು, ಮೈಸೂರು ೀವೆಯ ಗವರ್ಮೆಂಟ್ ಬಾಲಿಕಾ ಪಾಠಶಾಲೆಗಳ ಸೂಪರ್ಟಿಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ತಾರೀಖು 29ನೇ ಸೆಪ್ಟಂಬರ್ 1890.

ನಂ. 271.—1889ನೇ ಇಸವಿ ಫಿಬ್ರವರೀ 5ನೇ ಮುಕ್ತಂ 7140–71–ಸರ್ಕಿಲರ್ 200ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಘೋಯಿಷ್ಟ ಮಾಡಲ್ಪಟ್ಟ ಪರಿಷ್ಕರಿಸೋಣಾದ 1ನೇ ರೂಲಿನ ನಿಯಮಗಳನುಸರಿಸಿ ಮೈಸೂರು ರೆವಿನ್ಯೂ ಸರ್ವೆ ವ ಇನಾಂ ಸೆಟಲ್ಮೆಂಟ್ ಸೂಪರ್ಟಿಂಡೆಂಟರಾದ ಕರ್ನಲ್ ಜೆ. ಪಿ. ಗ್ರಾಂಟ್ ಯವರಿಗೆ 1890ನೇ ಇಸವಿ ಅಕ್ಟೋಬರ್ ಗುರ್ವೀ ತಾರೀಖು ಲಾಗಾಯತು 4 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 272.—ಮೆಸ್ಟರ್ ಯಂ. ರಾಮಸ್ವಾಮಿ ಅಯ್ಯರ್ ಬಿ. ಯೆ., ಬಿ. ಯಲ್. ಯವರು, ಮೈಸೂರು ಡಿಸ್ಟ್ರಿಕ್ಟು 3ನೇ ಜನಥಲ್ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟು ಮತ್ತು ಮುಜರಾಯಿ ಇಲಾಖಾ ಚಾರ್ಜನ್ನು 1890ನೇ ಇಸವಿ ಸೆಪ್ಟಂಬರ್ 12ನೇ ಮುಕ್ತಮಿನ ಪೂರ್ವಾನ್ಹದಲ್ಲಿ ಮೆಸ್ಟರ್ ಬಿ. ಕೃಷ್ಣಯ್ಯಂಗಾರ್ರಿಗೆ ಪೊಪ್ಪಿಸಿರುತ್ತಾರೆ.

ನಂ. 273.—ಸ್ಯ 1870ನೇ ಇಸವಿಯ Xನೇ ನಂಬರ್ ಲ್ಯಾಂಡ್ ಅಕ್ವಿಜಿಷ್ಟ ಆಕ್ಟಿನ 6ನೇ ಸೆಕ್ಷನ ನಿಯಮಗಳನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದಕ್ಕೆ ಲಗತ್ತಾಗಿರುವ ತಖ್ತೆಯಲ್ಲಿ ವಿವರಿಸೋಣಾದ ಜಮೀನು, ಸರ್ಕಾರ್ ಕೆಲಸಕ್ಕಾಗಿ ಅಂದರೆ ಯಡತೊರೆ ತಾಲ್ಲೂಕಿಗೆ ಕೇರಿದ ಗೋರಗುಂಡಿ ಗ್ರಾಮದಲ್ಲಿ ಮನೆಗಳು ಕಟ್ಟುವದಕ್ಕೆ ಬೇಕಾಗಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಹಿಜುನ್ದಾರನ ಹೆಸರು.	ಜಮೀನಿನ ವಿವರಣೆ, ವಿಸ್ತೀರ್ಣ ವ ಕಂದಾಯ.						ಚಕ್ಕು ಬಂದಿ.
					ವಿವರಣೆ ಮತ್ತು ನಂಬರ್.	ವಿಸ್ತೀರ್ಣ.		ಕಂದಾಯ.			
						ಯೆ.	ಗುಂ.	ರೂ.	ಆ.	ಪೈ.	
ಮೈಸೂರು	ಯಡತೊರೆ	ಹಿಪ್ಪೂರು	ಗೋರಗುಂಡಿ	ದೊಡ್ಡಕೆಟ್ಟಿಯ ಬಿಟ್ಟ ಪಾರ್ಮಾಣ್ಯನ ಬಿಟ್ಟು	ಖುಷ್ಕಿ 1ನೇ ನಂಬರ್ ಪೈಕಿ	1	20	1	8	0	ಪೂರ್ವಕ್ಕೆ—ದೊಡ್ಡಕೆಟ್ಟಿಯ 1ನೇ ನಂಬರ್ ಖುಷ್ಕಿ ಜಮೀನ್ ಪಶ್ಚಿಮಕ್ಕೆ—ಗೋರಗುಂಡಿ ಗ್ರಾಮ ಉತ್ತರಕ್ಕೆ—ನಾಲಾ ದಕ್ಷಿಣಕ್ಕೆ—4ನೇ ನಂಬರ್ ಖುಷ್ಕಿ ಜಮೀನ್
					ಖುಷ್ಕಿ 4ನೇ ನಂಬರ್ ಪೈಕಿ	0	20	0	8	0	ಪೂರ್ವಕ್ಕೆ—ದೊಡ್ಡಕೆಟ್ಟಿಯ 4ನೇ ನಂಬರ್ ಖುಷ್ಕಿ ಜಮೀನ್ ಪಶ್ಚಿಮಕ್ಕೆ—ಗೋರಗುಂಡಿ ಗ್ರಾಮ ಉತ್ತರಕ್ಕೆ—ದೊಡ್ಡಕೆಟ್ಟಿಯ 1ನೇ ನಂಬರ್ ಖುಷ್ಕಿ ಜಮೀನ್ ದಕ್ಷಿಣಕ್ಕೆ—ದೊಡ್ಡಕೆಟ್ಟಿಯ 4ನೇ ನಂಬರ್ ಖುಷ್ಕಿ ಜಮೀನ್

ನಂ. 277.—ಪಾವಗಡ ತಾಲ್ಲೂಕು ಅಮಲ್ದಾರ್ ರಾಘವೇಂದ್ರರಾಯರಿಗೆ, 1890ನೇ ಇಸವಿ ಸೆಪ್ಟಂಬರ್ 16ನೇ ಮುಕ್ತಂ 265ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ 15 ದಿವಸಗಳ ಕ್ಯಾಜ್ಯುಯಲ್ ರಜಾವು ಅವರ ಕೋರಿಕೆಯಂತೆ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 30ನೇ ಸೆಪ್ಟಂಬರ್ 1890.

ನಂ. 278.—1883ನೇ ಇಸವಿ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 4ನೇ ಸೆಕ್ಷನ (*b*) ಕ್ಲಾಜ್ ಅನುಸರಿಸಿ ಅಡ್ಡಿಷನಲ್ ಮುನಸಿಫರಾದ ಮೆಸ್ಟರ್ ಬಿ. ರಾಮಸ್ವಾಮಿ ಐಯ್ಯಂಗಾರ್ರು ಅಕ್ಟೋಬರ್ ಲಾಗಾಯತು ಕ್ರಿಸ್ಟಮಸ್ ವರವಿಗೆ ಮೈಸೂರು ವೊಕ್ಕಾಮಿನಲ್ಲಿ ತಮ್ಮ ಕೋರ್ಟನ್ನು ಮಾಡುವ ಬಗ್ಗೆ ಹುಕುಂ ಮಾಡಲ್ಪಟ್ಟಿರುತ್ತಾರೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 5ನೇ ಸೆಕ್ಷನ ಪ್ರಕಾರ ಸದರೀಯವರು ಮೈಸೂರು ಮುನಸಿಫರ ಅಧಿಕಾರ ಸರಹದ್ದಿಗೆ ವೊಳಪಟ್ಟ ತಾಲ್ಲೂಕುಗಳಲ್ಲಿ ಅಧಿಕಾರವನ್ನ ಚಲಾಯಿಸುವ ಬಗ್ಗೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

2. ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರು ಆಗಿಂಪಾಯ್ಮೆ ಖಾಯಂ ಮ್ಯುನಿಸಿಫರಿಗೂ ಮತ್ತು ಅಡ್ಡಿಷನಲ್ ಮ್ಯುನಿಸಿಫರಿಗೂ ಕೆಲಸವನ್ನು ಹಂಚಿಕೊಡತಕ್ಕದ್ದು.

ನಂ. 279.—ಚಾಮರಾಜನಗರ ತಾಲ್ಲೂಕು ಅಮಲ್ದಾರ್ ಗುಂಡಪ್ಪನವರಿಗೆ, 1890ನೇ ಇಸವಿ ಆಗಸ್ಟ್ 21ನೇ ಮುಕ್ತಂ 202ನೇ ನಂಬರ್ ಇಸ್ತಿಹಾರಿನಿಂದ ಕೊಡಲ್ಪಟ್ಟ 8 ದಿವಸಗಳ ಪ್ರಿವಿಲೀಜ್ ರಜಾವು ಇನ್ನೂ 4 ದಿವಸಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 280.—ಚಿತ್ರದುರ್ಗದ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ವ ಸೆಕಿಂಡ್ ಕ್ಲಾಸ್ ಪೂಜಿಸ್ಟ್ರೇಟರಾಧ ವೆಂಕ್ಟರ್ ಜಂಗಯ್ಯಚೆಟ್ಟಿ ಬಿ. ಯಿ. ಯವರಿಗೆ, ಈ ಕೆಳಗೆ ನಮೂದು ಮಾಡಲ್ಪಟ್ಟ ಜಾಸ್ತಿ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

(1.) ಮೊಕದ್ದಮೆಗಳನ್ನು ಸೆಷನ್ಸಿಗೆ ಕಮ್ಮಿಟ್ ಮಾಡುವ ಅಧಿಕಾರ (ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 206ನೇ ಸೆಕ್ಷನ್.)

(2.) ಸಾಕ್ಷಿಗಳ ವಾಂಗ್ಮೂಲಗಳನ್ನು ಸ್ವದಸ್ತೂರ್ ಇಂಗ್ಲೀಷ್ ಭಾಷೆಯಲ್ಲಿ ಬರದುಕೊಳ್ಳುವದಕ್ಕೆ ಅಧಿಕಾರ (ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 357ನೇ ಸೆಕ್ಷನ್.)

ತಾರೀಖು 3ನೇ ಅಕ್ಟೋಬರ್ 1890.

ನಂ. 284.—ಈ ಸಂವತ್ಸರದ ದಸರಾ ಹಬ್ಬದ ರಜಾವು 1890ನೇ ಇಸವಿ ಅಕ್ಟೋಬರ್ 18ನೇ ಮುಕ್ತಂ ಲಾಗಾಯತು 30ನೇ ಮುಕ್ತಂ ವರಿವಿಗೆ ಉಭಯ ದಿವಸಗಳೂ ಸೇರಿ ಯಿರುತ್ತವೆ.

2. ಜರೂರಿಯಾತ್ ಕೆಲಸಗಳು ನಡಿಸುವ ಬಗ್ಗೆ ಇಲಾಖೆಗಳ ಮುಖ್ಯಸ್ತರಿಂದ ಏರ್ಪಾಡುಗಳು ಮಾಡಲ್ಪಡತಕ್ಕದ್ದು.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರೀಯಿರುವ ನಡಪಳಿತವನ್ನು ರದ್ದು ಮಾಡೀ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈನುಳ್ಳ ಚಂದಾದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೇತಿಯನ್ನು ತಯಾರ್ಮಾಡಿ ಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರೇತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಜಿನಲ್ ರೇತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರಿ ರೇತಿಯನ್ನು ಹಣಬಂದಂತೆ ಬಿಪ್ಪಿಕೊಳ್ಳುವರು.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರೆಟರಿಯವರಿಗೆ ತಮ್ಮ ಕಾರ್ಡಿಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜಿಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರೆಟರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರೆಟರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕ್ಕುಂ ಬನೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.